## ಮಧ್ಯಂತರ ಅರ್ಜಿ ನಂ. 6 ರ ಮೇಲೆ ಆದೇಶ

1. ಅರ್ಜಿದಾರ/ಪ್ರತಿವಾದಿಯರ ಪರ ಪ್ರಸ್ತುತ ಅರ್ಜಿ ಸಲ್ಲಿಸಿ ಪಿಡಬ್ಲ್ಯೂ-1 ರವರ ಪಾಟೀಸವಾಲು ಇಲ್ಲವೆಂದು ಮಾಡಿದ ಆದೇಶವನ್ನು ತೆಗೆದುಹಾಕಿ ಪಾಟೀಸವಾಲಿಗೆ ಅನುಮತಿ ಕೇಳಿರುತ್ತಾರೆ.

2. ಸದರಿ ಅರ್ಜಿ ಜೊತೆ ಲಗತ್ತಿಸಿದ ಪ್ರಮಾಣಪತ್ರದಲ್ಲಿ ದಾವೆ ಸಲ್ಲಿಸಿದ ನಂತರ ಪ್ರಸ್ತುತ ಪ್ರತಿವಾದಿಯರು ತಮ್ಮ ಪ್ರತಿವಾದಪತ್ರ ಸಲ್ಲಿಸಿದ್ದು, ತದನಂತರದಲ್ಲಿ ವಿವಾದಾಂಶ ರೂಪಿಸಿರುತ್ತಾರೆ. ಆ ನಂತರ ವಾದಿ ಪರ ಸಾಕ್ಷಿಗಾಗಿ ನೇಮಿಸಿದಾಗ ವಾದಿ ಸಾಕಷ್ಟು ಕಾಲಾವಕಾಶ ಪಡೆದಿದ್ದಿರುತ್ತದೆ ಮತ್ತು ಪ್ರತಿವಾದಿ ಪರ ಪಾಟೀಸವಾಲು ಮಾಡಲು ದಿನಾಂಕ ನೇಮಿಸಿದಾಗ ವಾದಿ ನ್ಯಾಯಾಲಯಕ್ಕೆ ಹಾಜರಾಗದೇ ಉಳಿದಿರುತ್ತಾರೆ. ಈ ರೀತಿ ಇರುವಾಗ ಈ ಮೊದಲು ಪಾಟೀಸವಾಲು ಇಲ್ಲವೆಂದು ಮಾಡಿದ ಆದೇಶವನ್ನು ತೆಗೆದುಹಾಕಲು ಸಲ್ಲಿಸಿದ ಅರ್ಜಿ ಕೂಡಾ ಪುರಸ್ಕರಿಸಿದ್ದು, ತದನಂತರದಲ್ಲಿ ಪಿಡಬ್ಲ್ಯೂ-1 ರವರು ನ್ಯಾಯಾಲಯಕ್ಕೆ ಹಾಜರಾದಾಗ ಪಾಟೀಸವಾಲಿಗಾಗಿ ಕಾಲಾವಕಾಶ ಕೇಳಿದ ವಿನಂತಿಯನ್ನು ತಿರಸ್ಕರಿಸಿ ಪಾಟೀಸವಾಲು ಇಲ್ಲವೆಂದು ತೆಗೆದುಕೊಂಡಿದ್ದು ಇರುತ್ತದೆ.

3. ಸದರಿ ದಾವೆಯಲ್ಲಿಯ ವಿವಾಧ್ಯವನ್ನು ಬಗೆಹರಿಸಲು ಪಿಡಬ್ಲ್ಯೂ-1 ರವರ ಪಾಟೀಸವಾಲು ಮಾಡಲು ಅತೀ ಅವಶ್ಯವಿರುತ್ತದೆ. ಒಂದು ವೇಳೆ ಅರ್ಜಿಯಲ್ಲಿ ಕೇಳಿದಂತೆ ಆದೇಶ ಮಾಡದಿದ್ದರೆ ಪ್ರತಿವಾದಿಯರಿಗೆ ತುಂಬಲಾರದ ಲುಕ್ಸಾನು ಉಂಟಾಗುತ್ತದೆ. ಕಾರಣ ಆರ್ಜಿಯಲ್ಲಿ ತಿಳಿಸಿದಂತೆ ಪಾಟೀಸವಾಲು ಮಾಡಬೇಕೆಂದು ವಿನಂತಿಸಿರುತ್ತಾರೆ.

4. ಸದರಿ ಅರ್ಜಿಗೆ ವಾದಿ ಪರ ತಕರಾರು ಸಲ್ಲಿಸಿ ಪ್ರಸ್ತುತ ಪ್ರತಿವಾದಿಯರ ಪರ 2 ನೇ ಅರ್ಜಿಯಾಗಿದ್ದು, ಅದನ್ನು ಪುರಸ್ಕರಿಸಲು ಯಾವುದೇ ಸಕಾರಣವಿರುವುದಿಲ್ಲ. ಸದರಿ ಪ್ರತಿವಾದಿಯರು ವಾದಿಯನ್ನು ಸತಾಯಿಸಲು ಪ್ರಸ್ತುತ ಅರ್ಜಿಯನ್ನು ಸಲ್ಲಿಸಿರುತ್ತಾರೆ. ಈ ಮೊದಲು ಪಿಡಬ್ಲ್ಯೂ -1 ರವರು ತನ್ನ ಗಂಡನ ಅನಾರೋಗ್ಯದ ಕಾರಣ ಹಾಜರಾಗಿರಲಿಲ್ಲ ಹೊರತು ಯಾವುದೇ ದುರುದ್ದೇಶದಿಂದ ಕೂಡಿರಲಿಲ್ಲ. ಸದರಿ ಪ್ರತಿವಾದಿಯರು ಅನಾರೋಗ್ಯ ಹಾಗೂ ಮಳೆಯ ಕಾರಣದಿಂದ ನಿಗದಿತ ಅವಧಿಯೊಳಗಾಗಿ ವಕೀಲರನ್ನು ಭೇಟಿ ಮಾಡಲು ಆಗಿರಲಿಲ್ಲವೆಂದು ತಿಳಿಸಿದ ಸಂಗತಿ ಸತ್ಯಕ್ಕೆ ದೂರವಾಗಿರುತ್ತದೆ. ಪಾಟೀಸವಾಲು ಮಾಡಿದ ದಿನ ಯಾವುದೇ ಮಳೆ ಇರುವುದಿಲ್ಲ. ಕಾರಣ ಅರ್ಜಿಯನ್ನು ಖರ್ಚು ಸಹಿತ ವಜಾಗೊಳಿಸಬೇಕೆಂದು ವಿನಂತಿಸಿರುತ್ತಾರೆ.

5. ಸದರಿ ಅರ್ಜಿ ಮೇಲೆ ಸುನಾವಣೆ ಆಲಿಸಿದ ನಂತರ ಈ ಕೆಳಗಿನ ಅಂಶಗಳು ಉದ್ಭವಿಸಿರುತ್ತವೆ...........

## ಅಂಶಗಳು

1. ಮಧ್ಯಂತರ ಅರ್ಜಿ ನಂ. 6 ರಲ್ಲಿ ಕೇಳಿದ ಪರಿಹಾರ ಪಡೆಯಲು ಪ್ರತಿವಾದಿ ಅರ್ಹರಿರುತ್ತಾರೆಯೇ?

2. ಯಾವ ಆದೇಶ ?

6. ಮೇಲಿನ ಅಂಶಗಳಿಗೆ ಈ ಕೆಳಗಿನಂತೆ ಉತ್ತರಿಸಿದ್ದೇನೆಃ

ಅಂಶ ನಂ. 1: ಸಕಾರಾತ್ಮಕ

ಅಂಶ ನಂ. 2: ಅಂತಿಮ ಆದೇಶ

ಈ ಕೆಳಗೆ ನಮೂದಿಸಿದ ಕಾರಣಗಳಿಗಾಗಿ

## ಕಾರಣಗಳು

7. **ಅಂಶ ನಂ.1**:- ದಾವಾಸ್ತಿಗಳ ಕುರಿತು ಘೋಷಣಾತ್ಮಕ ಮಾಗಣಿ ಹಾಗೂ ದಾವಾ ಅನುಸೂಚಿ 2 ರಲ್ಲಿ ತಿಳಿಸಿದ ಆಸ್ತಿಯ ಕಬ್ಜೆ ಕೇಳಿ ವಾದಿ ದಾವೆ ಸಲ್ಲಿಸಿರುತ್ತಾರೆ. ಸದರಿ ದಾವೆಯಲ್ಲಿಯ ಸಂಗತಿಗಳನ್ನು ಪ್ರತಿವಾದಿ ಅಲ್ಲಗಳೆದಿರುತ್ತಾರೆ. ದಾವೆಯಲ್ಲಿ ಪ್ರತಿವಾದಿಯರ ಪರ ಸಾಕ್ಷಿಗಾಗಿ ಪ್ರಕರಣ ನೇಮಿಸಿದಾಗ ಪ್ರಸ್ತುತ ಅರ್ಜಿ ಸಲ್ಲಿಸಲಾಗಿದೆ.

8. ದಿವಾಣಿ ಪ್ರಕ್ರಿಯಾ ಸಂಹಿತೆ ಆದೇಶ -18 ನಿಯಮ -17 ರಡಿಯಲ್ಲಿ ನ್ಯಾಯಾಲಯವು ಸೂಕ್ತವೆಂದು ಆಲೋಚಿಸುವಂತಹ ಪ್ರಶ್ನೆಗಳ ಕುರಿತು ವಿಚಾರಣೆ

ಕುರಿತು ದಾವೆಯ ಯಾವುದೇ ಹಂತದಲ್ಲಿ ಈಗಾಗಲೇ ವಿಚಾರಣೆ ಮಾಡಲಾದ ಯಾವನೇ ಸಾಕ್ಷಿದಾರರನ್ನು ಪುನಃ ಕರೆಸಲು ಅವಕಾಶವಿರುತ್ತದೆಂದು ಸ್ಪಷ್ಟಪಡಿಸುತ್ತದೆ. ಈ ಹಿನ್ನೆಲೆಯಲ್ಲಿ ಪ್ರಸ್ತುತ ದಾವೆಯಲ್ಲಿಯ ಸಂಗತಿಗಳನ್ನು ಅವಲೋಕಿಸಲು ದಾವಾಸ್ತಿಗಳ ಕುರಿತು ಘೋಷಣಾತ್ಮಕ ಹಾಗೂ ದಿಃ 18–5–2002 ರಂದು ಆದ ಖರೀದಿ ಪತ್ರದ ರದ್ಧತಿ ಮತ್ತು ದಿಃ 13–8–1986 ರಂದು ಆದ ಮೃತ್ಯುಪತ್ರದ ರದ್ಧತಿ ಹಾಗೂ ಅನುಸೂಚಿ 2 ರಲ್ಲಿ ತಿಳಿಸಿದ ದಾವಾಸ್ತಿ ಕಬ್ಜೆಯನ್ನು ವಾದಿ ಕೇಳಿದ್ದರಿಂದ ಈ ಎಲ್ಲ ಸಂಗತಿಗಳ ಕುರಿತು ಪ್ರತಿವಾದಿ ತೆಗೆದುಕೊಂಡ ಪ್ರತಿರಕ್ಷಣಾ ನಿಲುವುಗಳೊಂದಿಗೆ ತುಲನೆ ಮಾಡಿ ನಿರ್ಧರಿಸುವುದು ಅತೀ ಅವಶ್ಯವಿರುತ್ತದೆ. ಈ ಕುರಿತು ಪ್ರತಿವಾದಿ ಪರ ಪಿಡಬ್ಲ್ಯೂ –1 ರವರನ್ನು ಪಾಟೀಸವಾಲಿಗೆ ಒಳಪಡಿಸಿದರೆ ದಾವೆಯನ್ನು ಪರಿಣಾಮಕಾರಿಯಾಗಿ ನಿರ್ಧರಿಸಲು ಅವಕಾಶ ಸಿಗುತ್ತದೆ. ಸದರಿ ಪಿಡಬ್ಲ್ಯೂ–1 ರವರ ಪಾಟೀಸವಾಲಿಗಾಗಿ ನೇಮಿಸಿದಾಗ ಪ್ರತಿವಾದಿ ಪರ ಪಾಟೀಸವಾಲಿಗೆ ಒಳಪಡಿಸಿಲ್ಲ ಎಂಬುವ ಮಾತ್ರಕ್ಕೆ ಆತನು ದಾವೆಯಲ್ಲಿ ತಿಳಿಸಲ್ಪಡುವ ಸಂಗತಿಗಳ ಕುರಿತು ತೆಗೆದುಹಾಕಲು ಬರಲಾರದು. ಸದರಿ ಪಿಡಬ್ಲ್ಯೂ–1 ರವರ ಪಾಟೀಸವಾಲಿಗಾಗಿ ಈಗಾಗಲೇ ಸಾಕಷ್ಟು ಕಾಲಾವಕಾಶ ನೀಡಿರುವುದು ಪ್ರಕರಣದ ರೋಜನಾಮೆಯಿಂದ ಸ್ಪಷ್ಟವಾಗಿ ಕಂಡುಬರುತ್ತದೆ. ಕಾರಣ ಸದರಿ ಅರ್ಜಿಯಲ್ಲಿ ಕೇಳಿದ ಮಾಗಣೆಯನ್ನು ಖರ್ಚು ಸಹಿತ ಪುರಸ್ಕರಿಸುವುದರಿಂದ ವಾದಿಯರ

ಹಿತವನ್ನು ಸಹ ಕಾಯ್ದುಂತಾಗುತ್ತದೆ. ಆದ್ದರಿಂದ ಅಂಶ ನಂ. 1 ಕ್ಕೆ **"ಸಕಾರಾತ್ಮಕ"** ಎಂದು ಉತ್ತರಿಸಿದ್ದೇನೆ.

9. **ಅಂಶ ನಂ. 2**:- ಮೇಲೆ ಚರ್ಚಿಸಿದ್ದರ ಅನುಗುಣವಾಗಿ, ಈ ಕೆಳಗಿನಂತೆ....

**ಆದೇಶ**

ಮಧ್ಯಂತರ ಅರ್ಜಿ ನಂ. 6 ನ್ನು ರೂ. 500/-

ಖರ್ಚು ಸಹಿತ ಪುರಸ್ಕರಿಸಲಾಗಿದೆ.

ಪಿಡಬ್ಲ್ಯೂ-1 ರವರ ಪಾಟೀಸವಾಲಿಗಾಗಿ

ಪ್ರಕರಣವನ್ನು ನಂತರ ಕರೆಯಿರಿ.

Sd/-

**ಸಿವಿಲ್ ನ್ಯಾಯಾಧೀಶರು, ಅಂಕೋಲಾ.**